ಪಾದ್ರಿಯೊಬ್ಬ ದೇವರಲ್ಲಿ ನಂಬಿಕೆ
ಕಳೆದುಕೊಂಡ ಕನಸು ಕಂಡು
ಪೂಜಾವಿಧಿ ಮಾಡಲು
ಆಗದೆ ಕೊರಗುವನು.

ಬಿದ್ದ ಭಾರವನ್ನು ಕಳೆದುಕೊಳ್ಳುವ
ಕಾತರದ ಹೆಂಗಸರು
ಹಗುರಾಗಿ ನೆಲ ಬಿಟ್ಟು ಪ್ರೀತಿ ಕಳೆದಿದೆ
ಎಂದು ಹಾರುವ ಗಂಡಸರು–
ಮಾಣಿಕ್ ದಾರ ಲೋಕದಲ್ಲಿ

ತೊಡಿಸುವ ವಸ್ತ್ರಾಭರಣಕ್ಕೆ ಭಕುತರು
ದೀಪ ಧೂಪಾರತಿಯ ಭಕುತರು
ಆಯುಧ ಪೂಜಿಸುವ ಭಕುತರು
ಭಕುತರು ನರ ನೆತ್ತರಿಗೆ
ಭಕುತಿ ಎಲ್ಲಿ?
ಭಕುತ ಪ್ರಾಣ ದೇವರೆಲ್ಲಿ!

ಸದಾ ಹೊರಗೇ ಇರುವ
ಕಿಕ್ಕಿರಿದು ತುಂಬಿದ
ಮನದ ಒಡೆಯ
ಇದ್ದದ್ದು ಕಾಣದೇ
ಇರದುದರೆಡೆಗೆ ತುಡಿವ
ಕವಿಸಮಯ!

## ಮಾಯಾಲೋಕ

ಗಾಳಿಯನ್ನು ಕೊಳ್ಳಬಹುದು ಗಾಳಿಗೆ
ಕೊಳ್ಳಲಾಗದು. ನೀರನ್ನು
ಕೊಳ್ಳಬಹುದು
ನೀರಿಗೆ ಕೊಳ್ಳಲಾಗದು. ಹಾಗೇ ಬೆಂಕಿ.

ಗಾಳಿ ನೀರು ಬೆಂಕಿ ಬೆರೆಸುವ
ಕಲೆಯ ಕೊಳ್ಳಬಹುದು
ಕಲೆಗೆ ಕೊಳ್ಳಲಾಗದು

ತಾಯಿ ತಂದೆ ಬಂಧು ಬಳಗ
ಕಕ್ಕುಲಾತಿ
ಗೆಳೆತನ ಇನಿತನ ಕಾಮ ಕ್ರೋಧ
ಗಳನ್ನು ಚೆಂದಾಗಿ ಗಾಜಿನರಮನೆಯಲ್ಲಿ
ಇಟ್ಟು ಬಣ್ಣದ ಲೇಸರ್ ಬೆಳಕಲ್ಲಿ
ಬೆಳಗಿ ಬೆಲೆ ಕಟ್ಟಬಹುದು
ಬೇಸಿಗೆಯಲ್ಲಿ ಮಳೆ ಮಳೆಗಾಲಕ್ಕೆ
ಚಳಿ ಚಳಿಗಾಲದಲ್ಲಿ ವಸಂತ
ಋತುಗಳನ್ನು ಕರಗಿಸಿ ಎರಕ ಹೊಯ್ದು
ಬೇಕೆಂದ ಕಾಲಕ್ಕೆ ಮಾರಬಹುದು
ಸೋತ ಋತುಮಾನಕ್ಕೆ ಏನೂ
ಕಿಸಿಯಲಾಗದು.

